# ಕರ್ನಾಟಕ ಸರ್ಕಾರ

## 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.

## ಸಿ.ಸಿ.ನಂ.1090/2024

ಪಿ.ಡಬ್ಲ್ಯೂಃ 4

ಸಿ.ಡಬ್ಲ್ಯೂಃ 4

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಮಹಮ್ಮದ್ ಇಸ್ರಾಲ್ |
| ತಂದೆಯ ಹೆಸರುಃ | ಃ | ಮುಹಿಬ್ |
| ವಯಸ್ಸು | ಃ | **30 ವರ್ಷ** |
| ಉದ್ಯೋಗ | ಃ | ಅಡಿಕೆ ವ್ಯಾಪಾರ |
| ವಾಸಸ್ಥಳ | ಃ | ರಂಗೇನಹಳ್ಳಿ |

**ದಿನಾಂಕಃ 04-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಈಗ್ಗೆ ಸುಮಾರು ಎರಡು ವರ್ಷಗಳ ಹಿಂದೆ ಸಂಜೆ 6-30 ಯಿಂದ 7-30 ಸಮಯದಲ್ಲಿ ನಾವು ರಂಗೇನಹಳ್ಳಿಯಿಂದ ಬಾವಿಕೆಗೆರೆಗೆ ನಾಗರಾಜ್ ರವರಿಗೆ ಹಣವನ್ನು ನೀಡಲು ನಾನು, ಚಾಸಾ-1 ಮತ್ತು 2 ರವರು ಹೋಗುತ್ತಿರುವಾಗ ಮರಳ್ ಮೋರಿ ಹತ್ತಿರ ಒಂದು ಬೈಕ್ ಮತ್ತು ಹೋಮಿನಿ ನಡುವೆ ಅಪಘಾತವಾದ್ದು, ಅಪಘಾತಕ್ಕೀಡಾದ ವ್ಯಕ್ತಿಗಳಿಗೆ ಉಪಚರಿಸಿ ಅಂಬುಲೆನ್ಸ್ ಗೆ ಕರೆ ಮಾಡಿರುತ್ತೇವೆ. ನಂತರ ಹೋಮಿನಿ ಯಲ್ಲಿದ್ದ ವ್ಯಕ್ತಿಗಳು ನಮ್ಮ ಉರ್ದು ಬಾಷೆಯಲ್ಲಿ ಮಾತನಾಡುತ್ತಿದ್ದರು ಎಂದು ದ್ವಿಚಕ್ರ ವಾಹನದಲ್ಲಿದ್ದ ವ್ಯಕ್ತಿಗಳು ನಮ್ಮನ್ನು ಅಪಾರ್ಥ ಮಾಡಿಕೊಂಡು ಅವರ ಕಡೆಯವರಿಗೆ ಕರೆ ಮಾಡಿ ಕರೆಯಿಸಿದ್ದು, ಆರೋಪಿತರೆಲ್ಲಾ ಬಂದು ಜಾತಿ ನಿಂದನೆ ಮಾಡುತ್ತಿರಾ ಎಂದು ನನಗೂ ಹಾಗೂ ಚಾಸಾ-1 ರವರಿಗೆ ಹೊಡೆದಿರುತ್ತಾರೆ. ಚಾಸಾ-1 ರವರಿಗೆ ಆರೋಪಿತರು ಕಲ್ಲಿನಿಂದ ಹೊಡೆದಿದ್ದು, ಕತ್ತಲಿದ್ದ ಕಾರಣ ಯಾರು ಹೊಡೆದರು ಎಂದು ಸರಿಯಾಗಿ ತಿಳಿದಿರುವುದಿಲ್ಲ. ಆರೋಪಿತರು ನನಗೂ ಸಹ ಕಲ್ಲಿನಿಂದ ಮತ್ತು ಕೈಕಾಲಿನಿಂದ ಹೊಡೆದಿರುತ್ತಾರೆ. ನನಗೆ ತಲೆಯ ಬಲಭಾಗದಲ್ಲಿ ಹೆಪ್ಪುಗಟ್ಟಿದ ಗಾಯವಾಗಿದ್ದು, ಎದೆಗೆ ಎಡಭಾಗದಲ್ಲಿ ನೋವಿನ ಅನುಭವ ಆಗಿರುತ್ತದೆ. ನಾನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಒಂದು ದಿನ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಚಾಸಾ-1 ರವರಿಗೆ ತಲೆಯ ಬಲ ಭಾಗದಲ್ಲಿ ರಕ್ತ ಹೆಪ್ಪುಗಟ್ಟಿದ ಗಾಯವಾಗಿದ್ದು, ಬೆನ್ನಿಗೆ ಗಾಯವಾಗಿರುತ್ತದೆ. ಅವರು ಸಹ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ

ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆ. ಪೊಲೀಸರು ಬಂದು ಆಸ್ಪತ್ರೆಯಲ್ಲಿ ನಮ್ಮ ಹೇಳಿಕೆ ದೂರನ್ನು ಪಡೆದುಕೊಂಡಿರುತ್ತಾರೆ.

( ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕಃ **27-12-2023** ರಂದು ಸಂಜೆ **7-30** ಗಂಟೆ ಸಮಯದಲ್ಲಿ ಲಕ್ಕವಳ್ಳಿ ಹೋಬಳಿ ರಂಗೇನಹಳ್ಳಿ ಗ್ರಾಮದ ಮರಳು ಮೋರಿ ಹತ್ತಿರ ಅಪಘಾತವಾದ ವಿಚಾರವಾಗಿ ಅಪಘಾತಕ್ಕಿಡಾದ ವ್ಯಕ್ತಿಗಳಿಗೆ ಉಪಚರಿಸುತ್ತಿದ್ದು, ಆರೋಪಿತರು ಬಂದು ಏಕಾಏಕಿ ಜಗಳ ತೆಗೆದು ನಮಗೆ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದರೆ ಸರಿ.

**ಪಾಟೀ ಸವಾಲು ಃ ಆರೋಪಿ ಪರ** ಶ್ರೀಮತಿ ಬಿ ಎಂ **ವಕೀಲರಿಂದ.**

ಬೈಕ್ ಮತ್ತು ಹೋಮಿನಿ ಆಗಿದ್ದು, ಹೋಮಿನಿಯವರು ಲಿಂಗದಹಳ್ಳಿಯರೆಂದು ತಿಳಿದುಬಂದಿರುತ್ತದೆ. ಚಾಸಾ-1, 2 ಮತ್ತು 3 ನನ್ನ ಸ್ನೇಹಿತರು ಎಂದರೆ ಸರಿ. ಆರೋಪಿತರು ತರೀಕೆರೆಯಿಂದ ರಂಗೇನಹಳ್ಳಿಗೆ ಬರುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಆರೋಪಿತರು ನಮಗೆ ಜಾತಿ ನಿಂದನೆ ಮಾಡಿರುತ್ತಾರೆಂದು ನಮ್ಮ ದೂರಿನಲ್ಲಿ ಹೇಳಿರುತ್ತೇವೆ. ನಿಮ್ಮ ದೂರಿನಲ್ಲಿ ಆ ರೀತಿ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲಎಂದರೆ ಸರಿಯಲ್ಲ. ಬೈಕಿನಲ್ಲಿ ಅಪಘಾತವಾದ ವ್ಯಕ್ತಿಗಳಿಗೆ 4 ನೇ ಆರೋಪಿ ಸಂಬಂಧಿಕರಾಗಬೇಕು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಅಪಘಾತವಾಗಿದ್ದನ್ನು ಆರೋಪಿತರು ನೋಡಿ ಬೈಕಿನ ಸವಾರರನ್ನು ತರೀಕೆರೆ ಅಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆಂದರೆ ಸಾಕ್ಷಿ ನಾನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. 4 ನೇ ಆರೋಪಿ ಚಾಸಾ-1 ರವರ ವಿರುದ್ಧ ಈಗಾಗಲೇ ಒಂದು ಪ್ರಕರಣ ದಾಖಲಿಸಿರುತ್ತಾರೆಂದರೆ ಸರಿ. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಚಾಸಾ-1 ರವರು ಆರೋಪಿತರ ವಿರುದ್ಧ ಸದರಿ ಪ್ರಕರಣ ದಾಖಲು ಮಾಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರ ಮಧ್ಯೆ ವೈಮನಸ್ಸು ಇರಲಿಲ್ಲ ಎಂದು ನುಡಿದಿರುತ್ತಾರೆ. ಕಲ್ಲಿನಿಂದ

ಯಾರು ಹೊಡೆದರು ಎಂದು ಈಗ ಖಚಿತವಾಗಿ ಹೇಳಲು ಬರುವುದಿಲ್ಲ. ಆರೋಪಿತರು ನಿಮಗೆ ಯಾವುದೇ ರೀತಿ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿತರ ಮೇಲೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**